ದಿಃ 15.12.2018 ರಂದು ಸಾಕ್ಷಿದಾರರಿಗೆ ಸತ್ಯಪ್ರತಿಜ್ಞೆಯನ್ನು ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಅರ್ಜಿದಾರರ ಪರವಾಗಿ ಶ್ರೀ ಜೆ.ಕೆ. ವಕೀಲರಿಂದಃ-

ನಾನು ಅಸಲು ದಾವಾ ಸಲ್ಲಿಸುವ ಕಾಲಕ್ಕೆ ಸ್ವತ್ತುಗಳಲ್ಲಿ ಯಾರು ಮಾಲಿಕರು ಇದ್ದರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ, ನನ್ನ ಚಿಕ್ಕಪ್ಪನಾದ ಕೆ. ಚೆನ್ನಬಸಪ್ಪ ಮತ್ತು ಅವರು ಸ್ವಾಧೀನದಲ್ಲಿ ಇದ್ದರು. ನನ್ನ ಚಿಕ್ಕಪ್ಪ ಮತ್ತು ಅವರ ಮಕ್ಕಳು ಯಾವತ್ತು ಸ್ವಾಧೀನದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಅಸಲು ದಾವೆಯಲ್ಲಿ ನಮ್ಮ ಚಿಕ್ಕಪ್ಪನವರು ಕೊಟ್ಟಿದ್ದ ಘೋಷಣೆ ಮತ್ತು ಪಾಲುವಿಭಾಗ ಪತ್ರವನ್ನು ಹಾಜರುಪಡಿಸಿದ್ದೇನೆ. ನಮ್ಮ ಚಿಕ್ಕಪ್ಪನವರು ಕುಟುಬಂದ ಸದಸ್ಯರ ಒಪ್ಪಿಗೆ ಪಡೆದುಕೊಂಡು ಭೂನ್ಯಾಯ ಮಂಡಳಿಯ ಮುಂದೆ ಘೋಷಣೆ ಸಲ್ಲಿಸಿದ್ದಾರೆ. ನಮ್ಮ ಚಿಕ್ಕಪ್ಪನವರು ಅವರ ಕುಟುಂಬದ ಸದಸ್ಯರಾದ ಕೆ.ಸಿದ್ದಪ್ಪ, ಮೊದಲನೆಯ ಹೆಂಡತಿಯ ಮಗಳಾದ ಕೆ.ಬೆಟ್ಟಮ್ಮ, ರೇಣುಕಮ್ಮ, ಹರ್ಷವರ್ದನ, ರವೀಂದ್ರನಾಥರವರ ಒಪ್ಪಿಗೆ ತೆಗೆದುಕೊಂಡಿದ್ದರು. ಉದ್ದೇಶಪೂರ್ವಕವಾಗಿ ಭೂನ್ಯಾಯಮಂಡಳಿಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಅವರು ನನಗೆ ಯಾರು ಎಂದು ಗೊತ್ತೇ ಇಲ್ಲ ಎನ್ನುತ್ತಾರೆ. ನಾನು ಮತ್ತು ನನ್ನ ಚಿಕ್ಕಪ್ಪನವರು ಬಸಪ್ಪನವರನ್ನು ಕಿತ್ತೋಗೆಯಬೇಕು ಅಂತ ಸುಳ್ಳು ವ್ಯವಹಾರಗಳನ್ನು ನೆಡೆಸಿದ್ದೇವೆ ಎಂದರೆ ಸರಿಯಲ್ಲ. ಬಸಪ್ಪ ಹಿಂದಿನ ಮಾನ್ಯ ನ್ಯಾಯಾಲಯದ ವ್ಯವಹರಣೆಗಳಲ್ಲಿ ಪಕ್ಷಗಾರರನಾಗಿಲ್ಲದೆ ಇರುವುದರಿಂದ ಮಾನ್ಯ ನ್ಯಾಯಾಲಯದ ತೀರ್ಪು ಬಸಪ್ಪನಿಗಾಗಲಿ ಆತನ ವಾರಸುದಾರರಿಗಾಗಲಿ ಬಂದಪಡಿಸುವುದಿಲ್ಲ ಎಂದರೆ ಸರಿಯಲ್ಲ. ತೀರ್ಪು ಋಣಿಗಳು ದಾವಾ ಸ್ವತ್ತಿನಲ್ಲಿ ತೊಗರಿ, ಮೆಕ್ಕೆಜೋಳವನ್ನು ಬೆಳೆದಿರುತ್ತಾರೆ. ದಿಃ26.09.2018 ರಂದು ನಾನು ಮತ್ತು ತೀರ್ಪು ಋಣಿಗಳು ಅರ್ಜಿದಾರರಿಗೆ ತೊಂದರೆ ಕೊಡಲು ದಾವಾ ಸ್ವತ್ತುಗಳ ಬಳಿ ಹೋಗಿ ಗಲಾಟೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಹೊಲವನ್ನು ಬಿಡಿ ಅಂತ ಅರ್ಜಿದಾರರ ಬಳಿ ಹೋಗಿ ದೌರ್ಜನ್ಯ ಮಾಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಅರ್ಜಿದಾರರು ಮೆಕ್ಕೆ ಜೋಳ ಬೆಳೆದಿದ್ದರು ಎಂದರೆ ಸರಿಯಲ್ಲ. ಅರ್ಜಿದಾರರು ಮತ್ತು ಬಸಪ್ಪ 30 ವರ್ಷಗಳಿಗಿಂತಲೂ ಹೆಚ್ಚಿನ ಕಾಲ ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ದಿಃ26.09.2018 ರಂದು ನಾವು ಹೋಗಿ ಗಲಾಟೆ ಮಾಡಿದ್ದೇವೆ, ಈ ಬಗ್ಗೆ ಪಂಚಾಯಿತಿ ಆಗಿದೆ ಎಂದರೆ ಸರಿಯಲ್ಲ. ಅಡವಿ ಮಲ್ಲಿನಕೇರಿಯಲ್ಲಿ ಊರಿನವರೆಲ್ಲ ಅರ್ಜಿದಾರರು 30 ವರ್ಷಗಳಿಂದ ಸ್ವಾಧೀನದಲ್ಲಿದ್ದಾರೆ ತೊಂದರೆ ಕೊಡಬೇಡಿ ಅಂತ ಬುದ್ದಿಹೇಳಿ ಕಳುಹಿಸಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಬಸಪ್ಪನ ಸ್ವತ್ತುಗಳು ಅಂತ ನಮ್ಮ ಮುಂದೆ ಊರಿನವರು ವಾದ ಮಾಡಿದ್ದಾರೆ ಎಂದರೆ ಸರಿಯಲ್ಲ. ಕಳೆದ 30 ವರ್ಷಗಳಿಂದ ಅರ್ಜಿದಾರರೇ ಸ್ವಾಧೀನದಲ್ಲಿರುವುದರಿಂದ ಅವರೇ ಮಾಲಿಕರಾಗಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ ಮೇಲೆ ನಮಗೆ ಯಾವುದೇ ಹಕ್ಕು ಇಲ್ಲದೇ ಇರುವುದರಿಂದ ಜಾರಿ ಅರ್ಜಿಯು ನಮಗೆ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

ಹಿರಿಯ ಸಿವಿಲ್ ನ್ಯಾಯಾಧೀಶರು,
ಹೂವಿನಹಡಗಲಿ.